**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 179/2023**

**ಚಾ.ಸಾ- 4**
**ಪ್ರಾ.ಸಾ - 5**

**ಸಾಕ್ಷಿಗೆ ದಿನಾಂಕ 23-07-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಿದ್ದಲಿಂಗರೆಡ್ಡಿ |
| ತಂದೆಯ ಹೆಸರು | ಃ | ಶಿವಣ್ಣ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಸಿ.ಪಿ.ಸಿ. ಹುಣಸಗಿ, ಪೊಲೀಸ್ ಠಾಣೆ |
| ವಾಸಸ್ಥಳ | ಃ | ಹುಣಸಗಿ ಜಿಃ ಯಾದಗಿರಿ |

**<u>ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

2015 ರಿಂದ ಜುಲೈ-2023ರವರೆಗೆ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 10-05-2023ರಂದು ರಾತ್ರಿ 10 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-1ರವರು ದಾಳಿಗೆ ಹೋಗುವುದು ಇದೆ ಎಂದು ನನಗೆ ಮಾಹಿತಿ ನೀಡಿದರು. ನಂತರ ಇಬ್ಬರು ಪಂಚರಾದ ಚಾಸಾ-2 ಮತ್ತು 3 ರವರನ್ನು ಮಾಡಿಕೊಂಡಿರುತ್ತೇವೆ. ಸರಕಾರಿ ಜೀಪ್ ನಂ. ಕೆಎ-32 ಜಿ-968 ನೇದ್ದರಲ್ಲಿ ಎಲ್ಲರೂ ಕೂಡಿಕೊಂಡು ಜೇವರ್ಗಿ ತಾಲೂಕಿನ ಕೂಡಿ ದರ್ಗಾದ ಹತ್ತಿರ ಹೋದೆವು. ಅಲ್ಲಿ ಹೋಗಿ ಹೋಟೆಲ್ ಗೋಡೆಯ ಮರೆಯಲ್ಲಿ ನಿಂತು ನೋಡಿದಾಗ ಅಲ್ಲಿ ಇಬ್ಬರು ವ್ಯಕ್ತಿಗಳು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದರು. ನಾವೆಲ್ಲರೂ ಸೇರಿ ಏಕಕಾಲದಲ್ಲಿ 2-30 ಗಂಟೆಗೆ ದಾಳಿ ಮಾಡಿದೆವು. ಅಲ್ಲಿಂದ ಅವರು ಓಡಿಹೋಗುತ್ತಿದ್ದರು ನಾವೆಲ್ಲರೂ ಸೇರಿ ಹಿಡಿದಿರುತ್ತೇವೆ. ಅವರ ಹೆಸರನ್ನು ವಿಚಾರಿಸಿದಾಗ ಒಬ್ಬರ ಹೆಸರು ಜಗನ್ನಾಥ ಮತ್ತು ಇನ್ನೊಬ್ಬ ಫರೀದ ಬಾಬಾ ಎಂದು ತಿಳಿಸಿದರು. ಸದರಿ ಮದ್ಯವನ್ನು ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದರು. ಅವರ ಹತ್ತಿರ ಇದ್ದಂತಹ ಮದ್ಯವವನ್ನು ಚಾಸ--1ರರು ಪಂಚರ ಸಮಕ್ಷಮ ವಶಪಡಿಸಿಕೊಂಡರು. ಪಂಚನಾಮೆಯನ್ನು ಮಾಡಿದ ನಂತರ ಮುದ್ದೆಮಾಲು, ಆರೋಪಿತರನ್ನು ಹಾಗೂ ಪಂಚನಾಮೆಯೊಂದಿಗೆ ಚಾಸಾ-1ರವರ ಜೊತೆಗೆ ಠಾಣೆಗೆ ಬಂದು ಠಾಣಾಧಿಕಾರಿಗೆ ವರದಿ ಸಲ್ಲಿಸಿರುತ್ತೇವೆ. ದಾಳಿಯಲ್ಲಿ ಸಹಾಯ ಮಾಡಿರುತ್ತೇನೆ.

ಜಗನ್ನಾಥನ ಹತ್ತಿರ 90 ಎಂ.ಎಲ್.ನ 96 ಪೌಚುಗಳು ಹಾಗೂ ರೂ.10158/-ಗಳು,

ಬಾಬಾಫರೀದನ ಹತ್ತಿರ 90 ಎಂ.ಎಲ್.ನ 26 ಪೌಚುಗಳು ಹಾಗೂ ರೂ.8530/- ಗಳು ಇದ್ದವು. ಸದರಿ ಹಣವನ್ನು ಮದ್ಯ ಮಾರಾಟ ಮಾಡಿ ಬಂದಂತಹ ಹಣ ಎಂದು ತಿಳಿಸಿರುತ್ತಾರೆ.

ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 124 ಪೌಚುಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎಸ್.ಪಿ. ವಕೀಲರಿಂದ</u>**

ಈ ಕುರಿತು ನೀವು ಹೇಳಿಕೆ ನೀಡಿದ್ದೀರಾ ಎಂದರೆ ಇದೇ ಮೊದಲ ಬಾರಿ ಇಲ್ಲಿ ಹೇಳಿಕೆ ನೀಡುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ಈ ಕೇಸಿಗೆ ಸಂಬಂಧಪಟ್ಟಂತೆ ಹೇಳಿಕೆಯನ್ನು ಎಲ್ಲಿಯೂ ಕೊಟ್ಟಿಲ್ಲ. ಪೊಲೀಸರು ದಾಳಿ ಮಾಡಲು ಬರುತ್ತಾರೆ ಎಂದರೆ ಅಲ್ಲಿ ಸಾಕಷ್ಟು ಜನರು ಬರುತ್ತಾರೆ ಎಂದರೆ ಸರಿ. ಘಟನಾ ಸ್ಥಳಕ್ಕೆ ಹೋದಾಗ ಎಷ್ಟು ಜನರು ಇದ್ದರು ಎಂದರೆ 10 ರಿಂದ 15 ಜನರು ಇದ್ದರು ಎಂದು ಉತ್ತರಿಸುತ್ತಾರೆ. ಆರೋಪಿತರು ಎಷ್ಟು ದೂರದಿಂದ ನೋಡಿರುತ್ತೀರಿ ಎಂದರೆ 15 ರಿಂದ 20 ಮೀಟರ್ ದೂರದಿಂದ ನೋಡಿರುತ್ತೇನೆ ಎಂದು ಉತ್ತರಿಸುತ್ತಾರೆ.

ಸದರಿ ಸ್ಥಳದಲ್ಲಿ ಜನರು ಹಣವನ್ನು ಕೊಟ್ಟು ಖರೀದಿ ಮಾಡುತ್ತಿದ್ದರು. ಖರೀದಿ ಮಾಡುತ್ತಿದ್ದಂತಹವರಿಗೆ ಹಿಡಿದು ವಿಚಾರ ಮಾಡಿದ್ದಾರಾ ಎಂದರೆ ಅವರು ಓಡಿಹೋಗಿದ್ದರು ಎಂದು ಉತ್ತರಿಸುತ್ತಾರೆ. ಘಟನಾ ಸ್ಥಳದ ಚೆಕ್ಕುಬಂದಿ ಹೇಳಲು ಬರುತ್ತಾ ಎಂದರೆ ಅಲ್ಲಿ ಆಶ್ರಯ ಕಾಲೋನಿಯ ಮನೆಗಳು ಇವೆ ಎಂದು ಉತ್ತರಿಸುತ್ತಾರೆ. ಪೂರ್ವ ಪಶ್ಚಿಮ ಹೇಳಲು ಬರುವುದಿಲ್ಲ. ಪಂಚರನ್ನು ಯಾರು ಕರೆದುಕೊಂಡು ಬಂದರು ಎಂದರೆ ಠಾಣೆಯಲ್ಲಿ ಕರೆಸಿದರು ಎಂದು ಉತ್ತರಿಸುತ್ತಾರೆ. ನೀವು ಘಟನಾ ಸ್ಥ,ಳಕ್ಕೆ ಹೋಗಿಲ್ಲ ನಿಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮುದ್ದೆಮಾಲುಗಳನ್ನು ಬೇರೆ ಬೇರೆ ಪ್ರಕರಣಗಳಲ್ಲಿ ಜಪ್ತಿಪಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಿಮ್ಮ ಮೇಲಾಧಿಕಾರಿಗಳು ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿದ ಕಾರಣ ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ